ಮೊದಲನೇ ಅಂತಸ್ತು ಪೆರಿನಾಝುಳ ವಾಸದ ಸ್ಥಳ; ಎಲ್ಲಕ್ಕಿಂತ ಮೇಲಿನ ಅಂತಸ್ತಿನಲ್ಲಿ ಹೂತೋಟ ಮತ್ತು ಈಜುಕೊಳಗಳಿದ್ದುವೆಂದು ಮುಂದೆ ತಿಳಿಯಿತು.

ಪೆರಿನಾಝುಳಿಗೆ ಸುಮಾರು ಅರವತ್ತಕ್ಕೂ ಮೀರಿದ ವಯಸ್ಸೆಂದು ತಿಳಿದಿದ್ದರಿಂದ ವಯಸ್ಸಾದ ಫಾರ್ಸಿ ಹೆಂಗಸನ್ನು ನಿರೀಕ್ಷಿಸುತ್ತ ಕುಳಿತಿದ್ದೆ. ಬೀಸಾಗಿ ಗಾಳಿಯಲ್ಲಿ ತೇಲಿಕೊಂಡು ಬಂದಂತೆ ಬಾಗಿಲು ದಾಟಿ ಮೆಲ್ಲನೆ ಬಂದ ಪೆರಿನಾಝುಳು ಅವಳ ಹೆಸರಿಗೆ ತಕ್ಕಂತೆ ಈಗಲೋ ಮತ್ತೆಯೋ ಕರಗಿಹೋಗುವ ಯಕ್ಷಿಣಿಯಂತೆ ಕಂಡಳು. ತೋಳಿಲ್ಲದ ರವಕೆ, ನಸು ಬಣ್ಣದ ಶಿಫಾನ್ ಸೀರೆ, ಭುಜದಗಲಕ್ಕೂ ಚಿನ್ನದ ಬ್ರೋಚಿನಲ್ಲಿ ಸಿಕ್ಕಿಸಿ ಹಿಂದೆ ಇಳಿಬಿಟ್ಟಿದ್ದ ಸೆರಗು. ಐದಡಿ ಎಂಟಿಂಚಿನಷ್ಟು ಉದ್ದದ ನೀಳಕಾಯ, ಗುಂಗುರು ಕೂದಲು, ಯುರೋಪಿನವರಂತಹ ಕೆಂಪು-ಬಿಳಿ ಬಣ್ಣ, ಮೆಲುಸ್ವರದಲ್ಲಿ, 'ಹೆಲೊ...' ಎನ್ನುತ್ತ ಸೋಫಾದ ತುದಿಯಲ್ಲಿ ಕುಳಿತವಳು ಜೊತೆಗೆ ಬಂದಿದ್ದ ಪರಿಚಾರಿಕೆಯೊಂದಿಗೆ ಚಾ-ತಿಂಡಿಯ ವ್ಯವಸ್ಥೆ ಮಾಡುವಂತೆ ಗುಜರಾತಿಯಲ್ಲಿ ಗುಣುಗುಣಿಸಿದಳು. ಗುಜರಾತಿ-ಹಿಂದಿ ಮಾತಾಡುವಾಗಲೂ ಏನೋ ಒಂದು ನಯ ನಾಜೂಕು. ಮಾತೋ ತೀರ ಮೃದು. ನಾಚಿಕೆಯ ಮುಖಭಾವ, ಸದಾ ಮಿನುಗುವ ಸಣ್ಣ ನಗೆ, ಚುರುಕಿನ ನಡಿಗೆ, ನೇರ ನಿಲುವು – ಇವೆಲ್ಲವುಗಳಿಂದಾಗಿ ಇಪ್ಪತ್ತು-ಮೂವತ್ತರ ಯುವತಿಯಂತೆ ಭಾಸವಾಗುತ್ತಿತ್ತೇ ವಿನಃ ಅವಳ ಪ್ರಾಯದ ಅರಿವೇ ಆಗದಂತಾಯಿತು. ಅವಳದು ಕಲಾತ್ಮಕ ಸೊಗಡುಳ್ಳ, ನಾಚಿಕೆಯ ಸ್ವಭಾವ.

ಚಹಾ ಕುಡಿಯುವಾಗ ನಮ್ಮಲ್ಲಿದ್ದ ಕೆಟಲೋಗ್ ನೋಡಿ ಪೆನ್ಸಿಲಿನಿಂದ ಗುರುತಿಸಿಕೊಳ್ಳುತ್ತ ಅಲ್ಲಲ್ಲಿ ವಿವರ ಕೇಳುತ್ತಿದ್ದಳು. ಎದುರೇ ಕುಳಿತು ಅವಳ ಮಾತುಗಳನ್ನು ಕಣ್ಣು-ಕಿವಿ ನೆಟ್ಟು ಆಲಿಸುತ್ತಿದ್ದ ನಾವಿಬ್ಬರು, ಸುತ್ತಮುತ್ತ ವಿನಮ್ರರಾಗಿ ಓಡಾಡುತ್ತಿದ್ದ ಕೆಲಸಗಾರರು. ಇವೆಲ್ಲದರ ನಡುವೆಯೂ ಅವಳ ಕಣ್ಣುಗಳ ಆಳದಿಂದ ಏಕಾಕಿತನದ ವೇದನೆಯೆಂಬುದು ಹರಿದುಬರುವಂತಿತ್ತು. ನಮ್ಮ ನಡುವೆ ಕುಳಿತಿದ್ದರೂ ಅಲ್ಲಿಲ್ಲದಂತೆ, ಮಾತನಾಡುತ್ತಿದ್ದರೂ ಬೇರೆಲ್ಲೋ ಇದ್ದಂತೆ ಅನಿಸುತ್ತಿತ್ತು.

'ನಡೆಯಿರಿ, ಅಳತೆ ತೆಗೆಯಬೇಕಲ್ಲವೇ?' ಎನ್ನುತ್ತ ಎದ್ದು ನಿಂತು, ಮೇಲಂತಸ್ತಿಗೆ ಕರೆದುಕೊಂಡು ಹೋದಳು. ಎದುರಿನ ದೊಡ್ಡ ಹಜಾರದಲ್ಲಿ ಎಲ್ಲೆಂದರಲ್ಲಿ, ಕಣ್ಣು ಹೋದಲ್ಲೆಲ್ಲ ಬೊಂಬೆಗಳೇ – ತರಹತರಹದ, ವಿವಿಧ ಗಾತ್ರದ ಬೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿಡಲಾಗಿತ್ತು. ಮೇಜಿನ ಮೇಲಿದ್ದ ಸೂಕ್ಷ್ಮ ಕಲೆಗಾರಿಕೆಯ ಮಂಟಪವನ್ನು ಇಬ್ಬರು ಜಪಾನೀ ಯುವಕರು ಸರಿಪಡಿಸುತ್ತಿದ್ದಂತೆ ಕಂಡುಬರುತ್ತಿತ್ತು. ನಮ್ಮನ್ನು ನೋಡಿ ಅವರು ತಿರುಗಿ ನಿಂತು ಬಗ್ಗಿ ವಂದಿಸಿದರು. ಒಬ್ಬನ ಕೈಗಳಲ್ಲಿ ಸಣ್ಣ ಸುತ್ತಿಗೆ ಮತ್ತು ಉಳಿ ಇದ್ದುವು, ಇನ್ನೊಬ್ಬನು ಬಣ್ಣ ಹಾಕುವ ಉದ್ದದ ಬ್ರಶ್ಶನ್ನು ತುದಿಬೆರಳುಗಳಲ್ಲಿ ಹಿಡಿದಿದ್ದ.

ಪೆರಿನಾಝ್ 'ಮುಂದುವರಿಸಿ' ಎನ್ನುವಂತೆ ಕೈಮಾಡಿ, ಚುರುಕಿನಲ್ಲಿ ಅವರನ್ನು ಪರಿಚಯಿಸಿದಳು. ಅದೊಂದು ಹದಿನೈದನೇ ಶತಮಾನದ ಜಪಾನೀ ನಾಟಕಗೃಹದ ಮಾದರಿಯೆಂದೂ, ಪೆರಿನಾಝುಳೇ ಅಳತೆ ಕೊಟ್ಟು ಮಾಡಿಸಿದ್ದೆಂದೂ ಜಪಾನಿನಲ್ಲೇ ತಯಾರಿಸಿದ ಆ ಕಲಾಕೃತಿಯ ಅಂತಿಮ ಹಂತದ ಕೆಲಸಕ್ಕೆಂದು ಈ ಕಲಾವಿದರು ಬಂದಿರುವುದಾಗಿಯೂ ಮತ್ತೆ ತಿಳಿಯಿತು.

ಒಳಗಿನ ಕೋಣೆಗೆ ಕಾಲಿಡುವಾಗ ಹಿನ್ನೆಲೆಯಲ್ಲಿ ಮೃದುವಾದ ಸ್ವರದ 'ಮಿನುಗೆಲೆ ಮಿನುಗೆಲೆ ನಕ್ಷತ್ರ....' ಹಾಡು ಕೇಳಿಬರುತ್ತಿತ್ತು. 'ತೊಂದರೆ ಆಗುವುದಾದಲ್ಲಿ ಹಾಡು ನಿಲ್ಲಿಸಲೇ? ತಗ್ಗಿನ ಸ್ವರದಲ್ಲಿ ಕೇಳಿದಳು.

'ಬೇಡ, ಬೇಡ. ತೊಂದರೆ ಏನಿಲ್ಲ.' ಎಂದೆ. ಆದರೂ ಧ್ವನಿಯ ಪರಿಮಾಣವನ್ನು ತಗ್ಗಿಸುವಂತೆ ಅಲ್ಲಿದ್ದ ವ್ಯಕ್ತಿಯೊಡನೆ ಸಂಜ್ಞೆಯಲ್ಲಿ ಸೂಚಿಸಿದಳು. ಆತ ಆ ಕೋಣೆಯ ಉಸ್ತುವಾರಿ ನೋಡಿಕೊಳ್ಳುವ ದಾಸ್‌ಗುಪ್ತನೆಂದು ಆನಂತರ ತಿಳಿಯಿತು. ಮುಂದೆ ಉಡುಪು ತಯಾರಿಯ ಸಮಯದಲ್ಲಿ ಯಾವುದೇ ಮಾಹಿತಿ ಬೇಕಾದಲ್ಲಿ ಆತನೇ ಸಂಪರ್ಕ-ವ್ಯಕ್ತಿಯಾಗುವವನಿದ್ದ.

ಆ ಕೋಣೆಯೆಂಬುದು ಅದೊಂದು ಸಂಗ್ರಹಾಲಯವೋ, ಮಾಯಾಲೋಕವೋ ಎಂಬಂತಿತ್ತು. ನಾವಿಬ್ಬರು ಗರಬಡಿದವರಂತೆ ನಿಶ್ಚಲವಾಗಿ ನಿಂತುಬಿಟ್ಟೆವು. ತರಹೇವಾರಿ ಗೊಂಬೆಗಳು, ಗೊಂಬೆಗಳ ಮನೆಗಳು, ಅವುಗಳ ಕಥಾಲೋಕಗಳು ಕ್ರಮಬದ್ಧವಾಗಿ ಇಡಲ್ಪಟ್ಟಿದ್ದವು. ಅವುಗಳನ್ನು ಜೋಡಿಸಿಟ್ಟ ಕ್ರಮವು ಎಷ್ಟು